



ಜೀವನದಲ್ಲಿ ನೆನಪಿಡಬೇಕಾದ 2 ವಿಷಯಗಳು:

1. ಯಾವ ಮನುಷ್ಯನೂ ಆಧಾರ್ ಕಾರ್ಡ್ ಅಥವಾ ಪಾನ್ ಕಾರ್ಡ್‌ನಲ್ಲಿ ಕಾಣಿಸುವಷ್ಟು ಕುರೂಪಿಯಲ್ಲ ಮತ್ತು ಫೇಸ್ ಬುಕ್ ಅಥವಾ ವಾಟ್ಸಪ್‌ನಲ್ಲಿ ಕಾಣಿಸುವಷ್ಟು ಸುಂದರನೂ ಅಲ್ಲ!

2. ಯಾವ ಪುರುಷನೂ ಅವನ ಪತ್ನಿ ತಿಳಿಸುವಷ್ಟು ಕೆಟ್ಟವನಾಗಿಲ್ಲ. ಅವನ ಅಮ್ಮ ಹೇಳುವಷ್ಟು ಒಳ್ಳೆಯವನೂ ಆಗಿರುವುದಿಲ್ಲ!

★★★

ಹೆಡ್ ಮಾಸ್ಟರ್: ಸ್ಕೂಲಿನ ಯೂನಿಫಾರ್ಮ್, ಪುಸ್ತಕಗಳು, ಶೂಸ್, ಸಾಕ್ಸ್, ಬೆಲ್ಟ್... ಇವೆಲ್ಲವನ್ನೂ ನೀವು ಶಾಲೆಯಿಂದಲೇ ಪಡೆದುಕೊಳ್ಳತಕ್ಕದ್ದು.

ಪಾಲಕರು: ಶಿಕ್ಷಣ?

ಹೆ.ಮಾ: ಅದನ್ನು ನೀವು ಹೊರಗಡೆ ಟ್ಯೂಷನ್ ಕ್ಲಾಸಿನಿಂದ ಪಡೆಯಬಹುದು!

★★★

ಗುಂಡ: ಇಲ್ಲಿ ಬಾರಯ್ಯಾ ವೈಟರ್

ವೈಟರ್: ಏನ್ ಕೊಡ್ಲಿ ಸಾರ್ ನಿಮ್ಗೆ?

ಗುಂಡ: 1 ಕಾಫಿಗೆ ಎಷ್ಟು ರೂಪಾಯಿ ಕಣಯ್ಯಾ?

ವೈಟರ್: 20 ರೂಪಾಯಿ ಸಾರ್...

ಗುಂಡ: ನನ್ನನ್ನೇನು ಬಕ್ರಾ ಅಂತ ತಿಳ್ಕೊಂಡ್ಯಾ, ಎದುರುಗಡೆ ಅಂಗಡಿಯಲ್ಲಿ 1 ಕಾಪಿಗೆ 1 ರೂಪಾಯಿ ಎಂದು ಬೋರ್ಡ್ ಹಾಕಿದ್ದಾರೆ?

ವೈಟರ್: ಕಣ್ತೆರೆದು ನೋಡಿ ಸಾರ್, ಅದು ಜೆರಾಕ್ಸ್ ಅಂಗಡಿ...!

★★★

ಭಾರತದ ಭೇಟಿಯಲ್ಲಿದ್ದ ರಷ್ಯಾ ದೇಶದ ಪ್ರಜೆಯೋರ್ವ ತನ್ನ ಕಣ್ಣುಗಳ ಪರೀಕ್ಷೆಗಾಗಿ ಡಾಕ್ಟರರ ಬಳಿ ಹೋದ ಡಾಕ್ಟರ್ ಕೆಳಗಿನ ಅಕ್ಷರಗಳನ್ನು ತೋರಿಸಿ, 'ಇದನ್ನು ಓದಬಲ್ಲೆಯಾ' ಎಂದು ಕೇಳಿದರು:

CZWXNQSTAZKY

ಆತ ಉತ್ತರಿಸಿದ, 'ಓದೋದೇನು ಬಂತು, ಈ ವ್ಯಕ್ತಿ ಯಾರೆಂದೂ ನನಗೆ ಚೆನ್ನಾಗಿ ಗೊತ್ತು. ಆತ ನನ್ನ ದೂರದ ಸಂಬಂಧಿ!'

★★★

ವಿದ್ಯುತ್ ಇಲಾಖೆಯ ಲೈನ್‌ಮ್ಯಾನ್ ಹುದ್ದೆಗೆ ಸಂದರ್ಶನ ನಡೆದಿತ್ತು...

ಪ್ರಶ್ನೆ: ನಗರ ಪ್ರದೇಶದಲ್ಲಿ ಅಚಾನಕ್ಕಾಗಿ ವಿದ್ಯುತ್ ಸಂಪರ್ಕ ಕಡಿದು ಹೋದರೆ ಮೊಟ್ಟಮೊದಲು ಏನನ್ನು ಬಂದ್ ಮಾಡುವೆ?

ಅಭ್ಯರ್ಥಿ: ಗ್ರಾಹಕರ ಕರೆ ಬರುವ ಫೋನು...!

ಆತ ಹುದ್ದೆಗೆ ಆಯ್ಕೆಯಾದ!

★★★

ಪತಿ: ಇತ್ತೀಚೆಗೆ ಸಿಗರೇಟು ಸೇದುವುದಕ್ಕೂ ನಿನ್ನ ಆಕ್ಷೇಪಣೆಯಿಲ್ಲ, ಶರಾಬು ಕುಡಿಯುವುದಕ್ಕೂ ನಿನ್ನ ಆಕ್ಷೇಪಣೆಯಿಲ್ಲ, ಏಕೆ?

ಪತ್ನಿ: ಅಂಥಾದ್ದೇನೂ ಇಲ್ಲ, ಮೊನ್ನೆ ಜೀವವಿಮಾ ಏಜೆಂಟ್ ಬಂದು ಪಾಲಿಸಿಯ ಲಾಭಾಂಶಗಳ ಬಗ್ಗೆ ಪೂರ್ತಿ ಮಾಹಿತಿ ನೀಡಿ ಹೋದ ಕಣ್ರೇ...!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**


